# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 275 (315) |
| ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 07-07-2023 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 5 ವರ್ಷಗಳಲ್ಲಿ ರವೀಂದ್ರ ಕಲಾಕ್ಷೇತ್ರ ಮತ್ತು ಮೈಸೂರಿನ ಕಲಾಭವನದ ನವೀಕರಣಕ್ಕೆ ಬಿಡುಗಡೆಯಾಗಿರುವ ಅನುದಾನವೆಷ್ಟು; ಅವುಗಳಲ್ಲಿ ವೆಚ್ಚವಾಗಿರುವ ಅನುದಾನವೆಷ್ಟು;</td><td>ಕಳೆದ 5 ವರ್ಷಗಳಲ್ಲಿ ರವೀಂದ್ರ ಕಲಾಕ್ಷೇತ್ರ ಹಾಗೂ ಮೈಸೂರಿನ ಕಲಾಭವನದ ನವೀಕರಣಕ್ಕೆ ಬಿಡುಗಡೆ ಮಾಡಲಾದ ಮತ್ತು ವೆಚ್ಚವಾಗಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ.<br><br>(ರೂ.ಲಕ್ಷಗಳಲ್ಲಿ)
<table>
<tr><th rowspan="2">ಕ್ರ.<br>ಸಂ.</th><th rowspan="2">ವರ್ಷ</th><th colspan="2">ರವೀಂದ್ರ ಕಲಾ ಕ್ಷೇತ್ರ</th><th colspan="2">ಮೈಸೂರು ಕಲಾ ಭವನ</th></tr>
<tr><th>ಬಿಡುಗಡೆ ಅನುದಾನ</th><th>ವೆಚ್ಚವಾದ ಮೊತ್ತ</th><th>ಬಿಡುಗಡೆ ಅನುದಾನ</th><th>ವೆಚ್ಚವಾದ ಮೊತ್ತ</th></tr>
<tr><td>1</td><td>2018-19</td><td>-</td><td>-</td><td>20.00</td><td>20.00</td></tr>
<tr><td>2</td><td>2019-20</td><td>-</td><td>-</td><td>121.00</td><td>121.00</td></tr>
<tr><td>3</td><td>2020-21</td><td>130.00</td><td>130.00</td><td>6.00</td><td>6.00</td></tr>
<tr><td>4</td><td>2021-22</td><td>-</td><td>-</td><td>-</td><td>-</td></tr>
<tr><td>5</td><td>2022-23</td><td>150.00</td><td>ಕಾಮಗಾರಿ ಪ್ರಾರಂಭವಾಗಿರುವುದಿಲ್ಲ.</td><td>115.25</td><td>115.25</td></tr>
</table>
</td></tr>
<tr><td>ಆ)</td><td>ನವೀಕರಣ ಮಾಡಿದ್ದಲ್ಲಿ, ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಪುನಃ ನವೀಕರಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ;</td><td>ರವೀಂದ್ರ ಕಲಾಕ್ಷೇತ್ರ:: 2020-21ನೇ ಸಾಲಿನಲ್ಲಿ ಬಿಡುಗಡೆಯಾದ ರೂ.130.00 ಲಕ್ಷ ಅನುದಾನದಲ್ಲಿ ರವೀಂದ್ರ ಕಲಾಕ್ಷೇತ್ರದ ಆಸನಗಳ ಮತ್ತು ವೇದಿಕೆ ದುರಸ್ತಿ, ಸೈಡ್ ವಿಂಗ್ಸ್ ಕರ್ಟನ್ಸ್ ದುರಸ್ತಿ, ವೆನಾಯಲ್ ಫ್ಲೋರಿಂಗ್ ದುರಸ್ಥಿ, ಕಾರಿಡಾರ್‌ಗಳಲ್ಲಿ ವಿದ್ಯುತ್ ದೀಪಗಳ ಅಳವಡಿಕೆ ಮಾಡಲಾಗಿರುತ್ತದೆ.<br><br>2022-23ನೇ ಸಾಲಿನಲ್ಲಿ ಬಿಡುಗಡೆಯಾದ ರೂ.150.00ಲಕ್ಷ ಅನುದಾನದಲ್ಲಿ ರವೀಂದ್ರ ಕಲಾಕ್ಷೇತ್ರದ ಮೇಲ್ಚಾವಣಿ ಎ.ಸಿ.ಶೀಟ್ ದುರಸ್ಥಿ ಕಾಮಗಾರಿ ಪ್ರಾರಂಭಿಸಬೇಕಿರುತ್ತದೆ.<br><br>ಮೈಸೂರು ಕಲಾಭವನ: 2018-19ನೇ ಸಾಲಿನಲ್ಲಿ ಬಿಡುಗಡೆಯಾದ ರೂ.20.00ಲಕ್ಷ ಅನುದಾನದಲ್ಲಿ ಕಲಾಮಂದಿರದ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.<br><br>2019-20ನೇ ಸಾಲಿನಲ್ಲಿ ಬಿಡುಗಡೆಯಾದ ರೂ.121.00 ಲಕ್ಷ ಅನುದಾನದಲ್ಲಿ ಮೈಸೂರಿನ ಕರ್ನಾಟಕ ಕಲಾಮಂದಿರದ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು, ಕಿರುರಂಗ ಮಂದಿರಕ್ಕೆ ಸಿ.ಸಿ.ಟಿ.ವಿ ಮ್ಯಾಟ್, ಎಸಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿರುತ್ತದೆ.<br><br>2020-21ನೇ ಸಾಲಿನಲ್ಲಿ ಬಿಡುಗಡೆಯಾದ ರೂ.6.00ಲಕ್ಷ ಅನುದಾನದಲ್ಲಿ ಮೈಸೂರಿನ ಕರ್ನಾಟಕ ಕಲಾಮಂದಿರದ ಆವರಣದಲ್ಲಿ ತಾಲೀಮು ಕೊಠಡಿ ನಿರ್ಮಾಣ ಮಾಡಲಾಗಿರುತ್ತದೆ.</td></tr>
</table>

<table>
<tr>
<td></td>
<td></td>
<td>
2022-23ನೇ ಸಾಲಿನಲ್ಲಿ ಬಿಡುಗಡೆಯಾದ ರೂ.115.25ಲಕ್ಷ ಅನುದಾನದಲ್ಲಿ, 'L' ಆಕಾರದ ಕಾಂಪೌಂಡ್ ನಿರ್ಮಾಣ, ಕಲಾಮಂದಿರದ ಪೈಪ್‌ಲೈನ್‌ಗಳ ದುರಸ್ಥಿ, ಮೇಲ್ಛಾವಣಿ ದುರಸ್ಥಿ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿಗಳು ಹಾಗೂ ಕಿರು ರಂಗಮಂದಿರದಲ್ಲಿ ಧ್ವನಿಬೆಳಕು ದುರಸ್ಥಿ ಮಾಡಲಾಗಿರುತ್ತದೆ.
ರವೀಂದ್ರ ಕಲಾಕ್ಷೇತ್ರ ಮತ್ತು ಮೈಸೂರು ಕಲಾಭವನದ ಪುನಃ ನವೀಕರಣ ಮಾಡುವ ಕುರಿತು ಪ್ರಸ್ತಾವನೆಯು ಸ್ವೀಕೃತಿಯಾದಲ್ಲಿ, ನಿಯಮಾನುಸಾರ ಪರಿಶೀಲಿಸಲಾಗುವುದು.
</td>
</tr>
<tr>
<td>ಇ)</td>
<td>ಪ್ರತಿ ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಬಾಡಿಗೆ ಎಷ್ಟು; ಕಳೆದ 5 ವರ್ಷದಿಂದ ಎಷ್ಟು ಕಾರ್ಯಕ್ರಮಗಳು ನಡೆದಿದೆ; ಎಷ್ಟು ಹಣ ಬಾಡಿಗೆ ರೂಪದಲ್ಲಿ ಇಲಾಖೆಗೆ ಸಂದಾಯವಾಗಿದೆ;</td>
<td>
1. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 24 ಕಸಧ 2022, ದಿನಾಂಕ:04.03.2022ರಲ್ಲಿ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ನಾಟಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಈ ಕೆಳಕಂಡಂತೆ ಬಾಡಿಗೆ ನಿಗದಿಪಡಿಸಲಾಗಿರುತ್ತದೆ.
<table>
<tr><th>ಕ್ರ. ಸಂ</th><th>ವಿವರ</th><th colspan="2">ರವೀಂದ್ರ ಕಲಾಕ್ಷೇತ್ರ ಬಾಡಿಗೆ</th></tr>
<tr><td rowspan="2">1.</td><td rowspan="2">(ನಾಟಕ)</td><td>ಮೊದಲನೇ ಪಾಳಿ (ಬೆಳಿಗ್ಗೆ 9-2)</td><td>ರೂ.5,000/- + 18% GST</td></tr>
<tr><td>ಎರಡನೇ ಪಾಳಿ (ಸಂಜೆ 4-9)</td><td>ರೂ.5,000/- + 18% GST</td></tr>
<tr><td rowspan="2">2.</td><td rowspan="2">ಸಾಂಸ್ಕೃತಿಕ ಕಾರ್ಯಕ್ರಮ</td><td>ಮೊದಲನೇ ಪಾಳಿ (9-2)</td><td>ರೂ.6,000/- + 18% GST</td></tr>
<tr><td>ಎರಡನೇ ಪಾಳಿ (4-9)</td><td>ರೂ.6,000/- + 18% GST</td></tr>
</table>
ರವೀಂದ್ರ ಕಲಾಕ್ಷೇತ್ರದಲ್ಲಿ ಕಳೆದ 5 ವರ್ಷಗಳಲ್ಲಿ 883 ಕಾರ್ಯಕ್ರಮಗಳು ನಡೆದಿದ್ದು, ಬಾಡಿಗೆ ರೂಪದಲ್ಲಿ ಒಟ್ಟು ರೂ.49,97,000/- ಗಳು ಸಂಗ್ರಹವಾಗಿರುತ್ತದೆ.
2. ಸರ್ಕಾರದ ಆದೇಶ ಸಂಖ್ಯೆ: ಕಸಂವಾ 404 ಕಸಧ 2015, ದಿನಾಂಕ:20.08.2015ರಲ್ಲಿ ಜಿಲ್ಲಾ ರಂಗಮಂದಿರಗಳ ಬಾಡಿಗೆಯನ್ನು ನಿಗದಿಪಡಿಸಿ ಆದೇಶಿಸಿದೆ. ಅದರನ್ವಯ ಮೈಸೂರು ಕಲಾ ಭವನದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ನಿಗದಿಪಡಿಸಿರುವ ಬಾಡಿಗೆಯ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ವಿವರ</th><th colspan="2">ಮೈಸೂರು ಕಲಾಭವನ</th></tr>
<tr><td>1.</td><td>ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ಟಿಕೆಟ್ ರಹಿತ</td><td>ಪ್ರತಿ ಪಾಳಿಗೆ</td><td>2,000/-</td></tr>
<tr><td>2.</td><td>ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿ ಟಿಕೆಟ್ ಸಹಿತ</td><td>ಪ್ರತಿ ಪಾಳಿಗೆ</td><td>3,000/-</td></tr>
</table>
ಮೈಸೂರಿನ ಕರ್ನಾಟಕ ಕಲಾಮಂದಿರದಲ್ಲಿ ಕಳೆದ 5 ವರ್ಷಗಳಲ್ಲಿ 351 ಕಾರ್ಯಕ್ರಮಗಳು ನಡೆದಿದ್ದು, ಬಾಡಿಗೆ ರೂಪದಲ್ಲಿ ಒಟ್ಟು ರೂ.74,25,786/- ಗಳು ಸಂಗ್ರಹವಾಗಿರುತ್ತದೆ.
</td>
</tr>
</table>

......3

| | | |
|---|---|---|
| ಈ) | ಕಲಾಕ್ಷೇತ್ರದಲ್ಲಿ ಯಾವ ಯಾವ ಕಾರ್ಯಕ್ರಮಗಳಿಗಾಗಿ ಅವಕಾಶ ನೀಡಲಾಗುವುದು? | ಕಲಾಕ್ಷೇತ್ರದಲ್ಲಿ ನಾಟಕ, ಸುಗಮಸಂಗೀತ, ನೃತ್ಯ ಯಕ್ಷಗಾನ, ಜಾನಪದ ಕಲೆ, ಸಾಹಿತ್ಯ ಇತ್ಯಾದಿಗಳಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸರ್ಕಾರಿ ಕಾರ್ಯಕ್ರಮಗಳಿಗೆ ಅವಕಾಶ ನೀಡಲಾಗುವುದು. |

ಸಂಖ್ಯೆ: ಕಸಂವಾ 25 ಕವಿಸ 2023.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.